ಪರಾತ್ಪರ ಗುರು ಡಾ. ಆಠವಲೆಯವರು

ತೆಗೆದುಕೊಂಡ ಅಧ್ಯಯನವರ್ಗಗಳು : ಖಂಡ ೩

# ಪರಾತ್ಪರ ಗುರು ಡಾ. ಆಠವಲೆಯವರ ಬಗ್ಗೆ ಸಾಧಕರು ವ್ಯಕ್ತಪಡಿಸಿದ ವೈಶಿಷ್ಟ್ಯಗಳು !

(Seekers reveal unique facets of Paratpar Guru (Dr) Athavale)

ಕನ್ನಡ (Kannada)


**ಸಂಕಲನಕಾರರು**

卐 **ಪರಾತ್ಪರ ಗುರು ಡಾ. ಜಯಂತ ಬಾಳಾಜಿ ಆಠವಲೆ**

(‘ಸಂತಪದವಿ’ ಅಥವಾ ‘ಗುರುಪದವಿ’ ಎಂದರೆ ಶೇ. ೭೦,
‘ಸದ್ಗುರುಪದವಿ’ ಎಂದರೆ ಶೇ. ೮೦ ಹಾಗೂ ‘ಪರಾತ್ಪರ ಗುರುಪದವಿ’
ಎಂದರೆ ಶೇ. ೯೦ ಮತ್ತು ‘ಈಶ್ವರ’ನೆಂದರೆ ಶೇ. ೧೦೦ ರಷ್ಟು ಆಧ್ಯಾತ್ಮಿಕ ಮಟ್ಟ !)

卐 **ಪ್ರೊ. ಶಿವಾಜಿ ಗಿರಜಪ್ಪ ವಟಕರ**



**ಸನಾತನ ಸಂಸ್ಥೆ**


ಜನವರಿ ೨೦೨೨ ರವರೆಗೆ ಸನಾತನದ ೩೫೦ ಗ್ರಂಥಗಳ ಕನ್ನಡ, ಹಿಂದಿ, ಆಂಗ್ಲ, ಮರಾಠಿ, ಗುಜರಾತಿ, ತಮಿಳು, ತೆಲುಗು, ಮಲಯಾಳಂ, ಬಂಗಾಲಿ, ಒರಿಯಾ, ಪಂಜಾಬಿ, ಅಸ್ಸಾಮಿ, ನೇಪಾಳಿ, ಜರ್ಮನ್, ಸರ್ಬಿಯನ್, ಫ್ರೆಂಚ್ ಮತ್ತು ಸ್ಪ್ಯಾನಿಶ್ ಈ ೧೭ ಭಾಷೆಗಳಲ್ಲಿ ೮೬,೧೧,೦೦೦ ಪ್ರತಿಗಳು !

**ಪ್ರಕಾಶಕರು** : ಶ್ರೀ ಸಿದ್ಧೇಶ್ವರ ಧರ್ಮಜಾಗೃತಿ ಸಂಸ್ಥೆ
Shree Siddheshwar Dharmajagruti Sanstha
ಮ.ಸಂ. 2ಬಿ–29ಎ, ಇಂದಿರಾನಗರ, ಕುಕ್ಕಿಕಟ್ಟೆ,
ಉಡುಪಿ 576 101, ಕರ್ನಾಟಕ. ದೂ.ಕ್ರ. : +91 93424 35617
ಇತರ ದೂ.ಕ್ರ. (ಗೋವಾ) : +91 (0832) 2312664
ವಿ–ಅಂಚೆ : granth@sanatan.org

**ಮುಖಪುಟದ ಪರಿಕಲ್ಪನೆ** : ಕು. ಭಾವಿನಿ ಕಪಾಡಿಯಾ ಮತ್ತು ಸೌ. ಜಾಹ್ನವಿ ಶಿಂದೆ

**First Edition** : Sri Ganesh Jayanti, Kaliyug Varsh 5123
(4th February 2022)

Translated from the original Marathi text ‘Paratpar Guru Dr. Athavale Yanchi sadhakani ulagadleli vaishishtye’

**ಅನುವಾದಕರು** : ಶ್ರೀ. ಗಣೇಶ ರಾಜಾರಾಮ ಕಾಮತ್

**ಮುದ್ರಣಸ್ಥಳ** : ಶುಭೋದಯ ಪ್ರಿಂಟರ್ಸ್, ಬೆಂಗಳೂರು.

**ದೇಣಿಗೆ ಮೌಲ್ಯ** : ₹ 95/–

**ISBN :** 978-93-92952-06-7 ಗ್ರಂಥ ಕ್ರ. : 332

© **ಪ್ರಕಾಶಕರು** All rights are reserved. No part of this publication maybe reproduced, stored in a retrieval system or transmitted, in any form or by any means, mechanical, photocopying, recording or otherwise, without prior written permission of the original publisher. Violators will be liable for criminal / civil action.

# ವಿಷಯಸೂಚಿ


೧. ಗ್ರಂಥದ ಸಂಕಲನಕಾರರ ಪರಿಚಯ ೬

೨. ಕೇವಲ ಅಧ್ಯಯನವರ್ಗಗಳ ಮಾರ್ಗದರ್ಶನದಿಂದಲ್ಲದೇ,
ತಮ್ಮ ಆಚರಣೆಗಳಿಂದಲೂ 'ಆದರ್ಶ ಸಾಧಕ'ರನ್ನು ರೂಪಿಸುವ
ಮಹಾನ್ ವಿಭೂತಿ : ಪರಾತ್ಪರ ಗುರು ಡಾ. ಜಯಂತ ಆಠವಲೆ ! ೮


---

## ಗ್ರಂಥದ ಅನುಕ್ರಮಣಿಕೆ

(ಅಧ್ಯಾಯದಲ್ಲಿನ ಕೆಲವು ವೈಶಿಷ್ಟ್ಯಪೂರ್ಣ ಅಂಶಗಳನ್ನು ಕೆಳಗೆ ಕೊಡಲಾಗಿದೆ.)


**೧. ಶ್ರೀ. ಅರವಿಂದ ಸೂರ್ಯಕಾಂತ ಪರಳಕರ, ಮಾಲಾಡ, ಮುಂಬೈ. ೧೨**

೧ ಅ. ಪ.ಪೂ. ಡಾ. ಆಠವಲೆಯವರ ಭೇಟಿ ಮತ್ತು ಅಧ್ಯಯನವರ್ಗಕ್ಕೆ
ಹೋಗಲು ಆರಂಭವಾಗುವುದು ೧೨

೧ ಆ. ಪ.ಪೂ. ಡಾಕ್ಟರರ ಕುರಿತು ಗಮನಕ್ಕೆ ಬಂದ ವೈಶಿಷ್ಟ್ಯಗಳು ೧೪

೧ ಇ. ಪ.ಪೂ. ಡಾಕ್ಟರರು ತಮ್ಮ ಅನುಪಸ್ಥಿತಿಯಲ್ಲಿಯೂ ಅಧ್ಯಯನ
ವರ್ಗಗಳನ್ನು ನಡೆಸಲು ಹೇಳಿ ಸಾಧಕನನ್ನು ತಯಾರಿಸುವುದು ೧೯

೧ ಉ. ಅಧ್ಯಯನವರ್ಗದಲ್ಲಿ ಬಂದ ಅನುಭೂತಿ ೨೧

**೨. ಪೂ. (ಶ್ರೀ.) ಶಿವಾಜಿ ಗಿರಿಜಪ್ಪ ವಟಕರ, ಸನಾತನ ಆಶ್ರಮ, ದೇವದ್, ಪನವೇಲ್. ೨೨**

೨ ಅ ೧. ಪ.ಪೂ. ಡಾ. ಆಠವಲೆಯವರ ಚೈತನ್ಯದಿಂದಾಗಿ
ಅಧ್ಯಯನವರ್ಗಗಳ ಕಡೆಗೆ ಆಕರ್ಷಿತವಾಗುವುದು ೨೩

೨ ಅ ೫. ಆರಂಭದಲ್ಲಿ ಅಧ್ಯಯನವರ್ಗಗಳ ಮೂಲಕ ಮಾಡುತ್ತಿದ್ದ
ಕಾರ್ಯವನ್ನು ಪ.ಪೂ. ಡಾಕ್ಟರರು ಈಗ 'ಮಹರ್ಷಿ ಅಧ್ಯಾತ್ಮ
ವಿಶ್ವವಿದ್ಯಾಲಯ'ದ ಮಾಧ್ಯಮದಿಂದ ಮಾಡುವುದು ೬೦

**೩. ಶ್ರೀ. ಕೊಂಡಿಬಾ ಅರ್ಜುನ ಜಾಧವ, ಫೋಂಡಾ, ಗೋವಾ. ೬೪**

೩ ಅ ೧. ಪ.ಪೂ. ಡಾಕ್ಟರರ ಕಲಿಸುವ ಪದ್ಧತಿ, ವಿಷಯದ ಕುರಿತು
ಮಾಡಿದ ಆಳವಾದ ಅಧ್ಯಯನ ಅಚ್ಚರಿಗೊಳಿಸುವಂತಹದಾಗಿತ್ತು ೬೫

೩ ಅ ೪. ಆಯುಷ್ಯದಲ್ಲಿ 'ಓರ್ವ ಶ್ರೇಷ್ಠ ಆಧ್ಯಾತ್ಮಿಕ ಗುರು'ಗಳು
ದೊರಕಿದುದರ ಸಮಾಧಾನವಾಗಿ ಗುರುಗಳನ್ನು ಹುಡುಕುವ
ಅಲೆದಾಟ ನಿಲ್ಲುವುದು ೬೬

೩ ಅ ೫. ಅಧ್ಯಯನವರ್ಗಗಳಲ್ಲಿ ಸೇವೆಯ ಮಹತ್ವವನ್ನು ಹೇಳಿದುದರಿಂದ ವರ್ಗಕ್ಕೆ ಬರುವ ಜಿಜ್ಞಾಸುಗಳು ಸೇವೆಗಾಗಿ ಉದ್ಯುಕ್ತರಾಗುವುದು ೬೭

೩ ಅ ೭. ಪ.ಪೂ. ಡಾಕ್ಟರರು ಅಧ್ಯಯನವರ್ಗಗಳಲ್ಲಿ ತಪ್ಪುಗಳ ಅರಿವು ಮಾಡಿಕೊಡುವುದು, ಆಗ 'ಸಾಧನೆಯಲ್ಲಿ ಎಷ್ಟು ಜಾಗರೂಕ ರಾಗಿರಬೇಕು' ಎಂಬುದು ಮೊದಲ ಬಾರಿಗೆ ಅರಿವಾಗುವುದು ೬೭

**೪. ನ್ಯಾಯವಾದಿ ರಾಮದಾಸ ಧೋಂಡೂ ಕೇಸರಕರ, ಸನಾತನ ಆಶ್ರಮ, ರಾಮನಾಥಿ, ಗೋವಾ. ೬೮**

೪ ಆ. ಅಧ್ಯಯನವರ್ಗ ತೆಗೆದುಕೊಳ್ಳುವ ಪ.ಪೂ. ಡಾಕ್ಟರರ ಅಲೌಕಿಕ ಪದ್ಧತಿ ೭೨

೪ ಆ ೨. ಮರಾಠಿ ಭಾಷೆಯ ಮೇಲಿನ ಪ್ರಭುತ್ವ ! ೭೨

೪ ಆ ೩. ತಾತ್ತ್ವಿಕ ಮತ್ತು ಪ್ರಾಯೋಗಿಕ ಭಾಗಗಳು ಸಹಜವಾಗಿ ಗಮನಕ್ಕೆ ಬರುವಂತೆ ವಿಷಯಗಳ ಮಂಡಣೆ ಮಾಡುವುದು ೭೨

೪ ಇ ೧. ಸಾಧಕರ ವೈಯಕ್ತಿಕ ಆಧ್ಯಾತ್ಮಿಕ ಉನ್ನತಿಯು ಅಧ್ಯಯನವರ್ಗಗಳ ಕೇಂದ್ರಬಿಂದುವಾಗಿರುವುದು ೭೪

೪ ಉ. ಸಂದೇಹ ನಿವಾರಣೆ ಮಾಡುವ ಪ.ಪೂ. ಡಾಕ್ಟರರ ವೈಶಿಷ್ಟ್ಯಪೂರ್ಣ ಪದ್ಧತಿ ಮತ್ತು ಅವರ ತಳಮಳ ! ೮೧

**೫. ಶ್ರೀ. ಅಭಯ ವಿಜಯ ವರ್ತಕ, ಸನಾತನ ಆಶ್ರಮ, ದೇವದ್, ಪನವೇಲ್. ೮೩**

೫ ಅ ೨. ಅಧ್ಯಯನವರ್ಗದ ಸ್ಥಳಕ್ಕೆ ಪ.ಪೂ. ಡಾಕ್ಟರರ ಆಗಮನವಾದ ನಂತರ ಮೊದಲ ಭೇಟಿಯಲ್ಲಿಯೇ ಅವರು ಅನೇಕರ ಮನಸ್ಸನ್ನು ಗೆಲ್ಲುವುದು ೮೪

೫ ಅ ೩. ಅಧ್ಯಯನವರ್ಗದಲ್ಲಿ ಸಾಧಕನು ಕೇಳಿದ ಪ್ರಶ್ನೆಗೆ ಅವನಿಗೆ ಪ್ರೋತ್ಸಾಹ ದೊರಕುವಂತೆ ಉತ್ತರ ಕೊಡುವುದು ೮೫

**೬. ಇತರ ಸಾಧಕರು ೮೬**

೬ ಅ. ಡಾ. ರೂಪಾಲಿ ಜೀವೂ ನಾಯಕ ಭಾಟಕಾರ, ಫೋಂಡಾ, ಗೋವಾ. ೮೬

೬ ಆ. ಡಾ. (ಸೌ.) ಲಿಂದಾ ಮಹಾರುದ್ರ ಬೋರಕರ, ಫೋಂಡಾ, ಗೋವಾ. ೮೮

೬ ಇ. ಶ್ರೀ ಗಣೇಶ ದತ್ತಾರಾಮ ಪೆಂಢಾರಕರ, ಸಾವಂತವಾಡಿ, ಸಿಂಧುದುರ್ಗ ಜಿಲ್ಲೆ. ೮೯

## ವಿಷಯಸೂಚಿಯಲ್ಲಿನ ಕ್ರಮಾಂಕ ೨

# ಕೇವಲ ಅಧ್ಯಯನವರ್ಗಗಳ ಮಾರ್ಗದರ್ಶನದಿಂದಲ್ಲದೇ, ತಮ್ಮ ಆಚರಣೆಗಳಿಂದಲೂ 'ಆದರ್ಶ ಸಾಧಕ'ರನ್ನು ರೂಪಿಸುವ ಮಹಾನ್ ವಿಭೂತಿ : ಪರಾತ್ಪರ ಗುರು ಡಾ. ಜಯಂತ ಆಠವಲೆ !

**೧. ತಮ್ಮ ಆಚರಣೆಗಳಿಂದಲೂ ಅಧ್ಯಾತ್ಮವನ್ನು ಕಲಿಸುವ ಪರಾತ್ಪರ ಗುರು ಡಾ. ಜಯಂತ ಆಠವಲೆ ! :** 'ಅನೇಕ ಪ್ರವಚನಕಾರರು, ಕೀರ್ತನಕಾರರು ಮುಂತಾದವರು ಅಧ್ಯಾತ್ಮದ ಬಗ್ಗೆ ಮಾರ್ಗದರ್ಶನ ಮಾಡುತ್ತಾರೆ. ಅವರಲ್ಲಿನ ಹೆಚ್ಚಿನ ಜನರು ಕೇವಲ ಶಬ್ದಗಳ ಸ್ತರದಲ್ಲಿ, ಅಂದರೆ ಜ್ಞಾನದ ಮಾಧ್ಯಮದಿಂದ ಕಲಿಸುತ್ತಾರೆ. ಇದಕ್ಕೆ ವಿರುದ್ಧವಾಗಿ ಪರಾತ್ಪರ ಗುರು ಡಾ. ಜಯಂತ ಆಠವಲೆಯವರು ಜ್ಞಾನದ ಮಾಧ್ಯಮದಿಂದ ಕಲಿಸುವುದರೊಂದಿಗೆ ತಮ್ಮ ಆಚರಣೆಗಳಿಂದಲೂ ಅಧ್ಯಾತ್ಮವನ್ನು ಕಲಿಸುತ್ತಾರೆ. ಇದು ಶಬ್ದಗಳ ಆಚೆಗಿನ ಸ್ತರದ ಕಲಿಸುವಿಕೆಯಾಗಿದೆ.

ಪರಾತ್ಪರ ಗುರು ಡಾಕ್ಟರರು ಅನೇಕ ಕಡೆಗಳಲ್ಲಿ ಅಧ್ಯಯನವರ್ಗಗಳಿಗೆ ಹೋಗುವಾಗ ಅಲ್ಲಿನ ಪ್ರತಿಯೊಬ್ಬ ಸಾಧಕನ ಇಷ್ಟಕ್ಕನುಸಾರ ತಿಂಡಿತಿನಿಸುಗಳನ್ನು ತೆಗೆದುಕೊಂಡು ಹೋಗುತ್ತಿದ್ದರು. ಅವರ ಈ ಕೃತಿಯಿಂದ ಸಾಧಕರ ಮೇಲೆ ಅವರಿಗೆ ಅರಿವಿಲ್ಲದೇ ಪ್ರೇಮಭಾವದ ಸಂಸ್ಕಾರವಾಗುತ್ತಿತ್ತು. ಅಧ್ಯಯನವರ್ಗದ ಸ್ಥಳಕ್ಕೆ ಹೋದಾಗ ಸಾಧಕರೊಂದಿಗೆ ಅಲ್ಲಿನ ಸ್ವಚ್ಛತೆಯನ್ನು ಮಾಡುವುದು, ಕುರ್ಚಿಗಳನ್ನು ಸಾಲಾಗಿ ಇಡುವುದು, ಪ್ರದರ್ಶನ ಕಕ್ಷೆಯಲ್ಲಿ ಗ್ರಂಥಗಳ ಮಂಡಣೆಯನ್ನು ಮಾಡುವುದು ಮುಂತಾದ ಕೃತಿಗಳನ್ನು ಅವರು ಸ್ವತಃ ಮಾಡುತ್ತಿದ್ದರು. ಇದರಿಂದ 'ನಾವು ಅಧ್ಯಾತ್ಮದಲ್ಲಿನ ಎಷ್ಟೇ ದೊಡ್ಡ ಜ್ಞಾನಿಗಳಾಗಿದ್ದರೂ, ಮೊದಲು ನಾವು 'ಗುರುಸೇವಕರಾಗಿದ್ದೇವೆ' ಎಂಬ ಭಾವವನ್ನಿಡುವುದರ ಬಗ್ಗೆ ಸಾಧಕರಿಗೆ ಕಲಿಯಲು ಸಿಗುತ್ತಿತ್ತು. ಅಧ್ಯಯನವರ್ಗಗಳಲ್ಲಿ ತಮ್ಮ ತಪ್ಪುಗಳನ್ನು ಮನಮುಕ್ತವಾಗಿ ಹೇಳುವುದು, ಅಧ್ಯಯನವರ್ಗಗಳ ನಂತರ ಎಲ್ಲರೊಂದಿಗೆ ನೆಲದ ಮೇಲೆ ಕುಳಿತು ಊಟ ಮಾಡುವುದು, ಇವುಗಳಂತಹ ಕೃತಿಗಳಿಂದ ಸಾಧಕರಿಗೆ ಸಾಧನೆಯಲ್ಲಿ ಅಹಂ ಇಟ್ಟುಕೊಳ್ಳದಿರುವುದರ ಬೋಧನೆ ಸಿಗುತ್ತಿತ್ತು. ಸಾಧಕರು ಇಂತಹ ಕಲಿಯಲು ಸಿಕ್ಕಿದ ಅನೇಕ ಅಂಶಗಳನ್ನು ಪ್ರಸ್ತುತ ಗ್ರಂಥಕ್ಕಾಗಿ ಬರೆದುಕೊಟ್ಟಿದ್ದಾರೆ.

**೨. 'ಬೋಲೆ ತೈಸಾ ಚಾಲೆ, ತ್ಯಾಚೀ ವಂದಾವೀ ಪಾವುಲೆ ।' (ನುಡಿದಂತೆ ನಡೆಯುವವನ ಚರಣಗಳಿಗೆ ಎರಗಬೇಕು) ಎಂಬ ಉಕ್ತಿಯನ್ನು ಸಾರ್ಥಕಗೊಳಿಸುವ**

**ಪರಾತ್ಪರ ಗುರು ಡಾಕ್ಟರರು ! :** ಪರಾತ್ಪರ ಗುರು ಡಾಕ್ಟರರು 'ನುಡಿದಂತೆ ನಡೆಯುವ' ವೃತ್ತಿಯವರಾಗಿದ್ದಾರೆ. ಇದರ ಕುರಿತು ಒಂದು ಉದಾಹರಣೆ ನನಗೆ ಇಂದಿಗೂ ನೆನಪಾಗುತ್ತದೆ. ಪರಾತ್ಪರ ಗುರು ಡಾಕ್ಟರರು ಅಧ್ಯಯನವರ್ಗಗಳಲ್ಲಿ ಯಾವಾಗಲೂ 'ದೇವರಿಗೋಸ್ಕರ ಹೆಚ್ಚೆಚ್ಚು ತ್ಯಾಗ ಮಾಡಿ. ನಾವು ದೇವರಿಗೋಸ್ಕರ ಸರ್ವಸ್ವದ ತ್ಯಾಗವನ್ನು ಮಾಡಿದರೆ ಮಾತ್ರ ದೇವರು ತನ್ನ ಸರ್ವಸ್ವವನ್ನು ನಮಗೆ ಕೊಡುವನು" ಎಂದು ಹೇಳುತ್ತಿದ್ದರು. ೧೯೯೨ ರಲ್ಲಿ ಶಿಷ್ಯಾವಸ್ಥೆಯಲ್ಲಿನ ಡಾ. ಆಠವಲೆಯವರು ತಮ್ಮ ಗುರುಗಳಾದ ಪ.ಪೂ. ಭಕ್ತರಾಜ ಮಹಾರಾಜರ 'ಗುರುಪೂರ್ಣಿಮಾ ಮಹೋತ್ಸವ'ವನ್ನು ಮುಂಬೈಯಲ್ಲಿ ಆಚರಿಸಿದರು. ಇದಕ್ಕೆ ಅನೇಕ ಸಾಧಕರ ಮತ್ತು ಭಕ್ತರ ಸಹಾಯ ದೊರಕಿದರೂ, ಈ ಮಹೋತ್ಸವದ ಎಲ್ಲ ಜವಾಬ್ದಾರಿಯು ಪರಾತ್ಪರ ಗುರು ಡಾಕ್ಟರರ ಮೇಲೆಯೇ ಇತ್ತು. ಆ ಸಮಯದಲ್ಲಿ ಅವರ ಮನೆ ಎಂದರೆ ಗುರುಪೂರ್ಣಿಮಾ ಮಹೋತ್ಸವದ ಸಿದ್ಧತೆಯ ಸೇವೆಯನ್ನು ಮಾಡುವ ಸಾಧಕರ ಆಶ್ರಮವೇ ಆಗಿತ್ತು. ಆ ಎಲ್ಲ ಸಾಧಕರು ಅಧ್ಯಯನವರ್ಗಗಳಿಗೆ ಬರುವವರಾಗಿದ್ದರು. ಈ ಮಹೋತ್ಸವಕ್ಕಾಗಿ ಪರಾತ್ಪರ ಗುರು ಡಾಕ್ಟರರು ತನು, ಮನ ಮತ್ತು ಧನದ ತುಂಬಾ ತ್ಯಾಗವನ್ನು ಮಾಡಿದರು. ಈ ಮಹೋತ್ಸವಕ್ಕಾಗಿ ಅವರು ಸಾಧಕರಿಗೆ ತಮ್ಮ ಸೇವೆಯೆಂದು ಸಮಾಜದಿಂದ ಅರ್ಪಣೆಯನ್ನು ಸಂಗ್ರಹಿಸಲು ಹೇಳಿದರು. ಮಹೋತ್ಸವವು ಉತ್ತಮ ರೀತಿಯಲ್ಲಿ ನೆರವೇರಿತು. ಮಹೋತ್ಸವಕ್ಕಾಗಿ ಅರ್ಪಣೆಯೆಂದು ಸಂಗ್ರಹವಾದ ಆಹಾರಧಾನ್ಯ ಇತ್ಯಾದಿಗಳು ಕೆಲವು ಪ್ರಮಾಣದಲ್ಲಿ ಉಳಿದಿದ್ದವು. ಅವೆಲ್ಲವನ್ನೂ ನಂತರ ಡಾ. ಆಠವಲೆಯವರು ಪ.ಪೂ. ಭಕ್ತರಾಜ ಮಹಾರಾಜರ ಇಂದೋರಿನ ಆಶ್ರಮಕ್ಕೆ ಕಳುಹಿಸಿದರು. ಸ್ವತಃ ಮಹೋತ್ಸವಕ್ಕಾಗಿ ಇಷ್ಟೊಂದು ತ್ಯಾಗ ಮಾಡಿರುವಾಗಲೂ ಮತ್ತು ಮುಂದೆಯೂ ತಮ್ಮ ಮನೆಯನ್ನು 'ಆಶ್ರಮ'ವೆಂದು ನಡೆಸಬೇಕಾಗಿದ್ದರೂ ಅವರು ಒಂದೂ ವಸ್ತುವನ್ನು ತಮಗೋಸ್ಕರ ಇಟ್ಟುಕೊಳ್ಳಲಿಲ್ಲ. ಅವರ ಈ ಆಚರಣೆಯಿಂದ ಅಧ್ಯಯನವರ್ಗಗಳಿಗೆ ಬರುವ ಸಾಧಕರು ಅಧ್ಯಯನವರ್ಗಗಳಲ್ಲಿ ಶಬ್ದಗಳ ಸ್ತರದಲ್ಲಿ ಏನೆಲ್ಲ ಕಲಿಯುತ್ತಿದ್ದರೋ, ಅದಕ್ಕಿಂತ ಅನೇಕ ಪಟ್ಟು ಹೆಚ್ಚು ಈ ಆಚರಣೆಯಿಂದ ಕಲಿತರು ! ಸಂಕ್ಷಿಪ್ತವಾಗಿ 'ಅಧ್ಯಾತ್ಮವನ್ನು ಪ್ರತ್ಯಕ್ಷವಾಗಿ ಹೇಗೆ ಜೀವಿಸಬೇಕು' ಎಂಬುದನ್ನು ಪರಾತ್ಪರ ಗುರು ಡಾಕ್ಟರರು ಕಲಿಸುತ್ತಿದ್ದರು. ಇದರಿಂದಲೇ ಸಾಧಕರು ಅವರು ಹೇಳಿದ ಸಾಧನೆಯ ಬಗೆಗಿನ ಮಾರ್ಗದರ್ಶನವನ್ನು ಕೃತಿಯಲ್ಲಿ ತರುತ್ತಿದ್ದರು ಮತ್ತು ಆ ಕಾಲದಲ್ಲೂ ಸಾಧಕರು ಅವರನ್ನು ಗುರುಗಳೆಂದೇ ಪರಿಗಣಿಸುತ್ತಿದ್ದರು.

೩. **ಪರಾತ್ಪರ ಗುರು ಡಾಕ್ಟರರ ವ್ಯಕ್ತಿತ್ವದ ವಿವಿಧ ಸ್ತರಗಳು :** ಈ ಗ್ರಂಥದಲ್ಲಿ

ಅಧ್ಯಯನವರ್ಗಗಳಿಗೆ ಬರುವವರು ಪರಾತ್ಪರ ಗುರು ಡಾಕ್ಟರರ ವಿವಿಧ ವೈಶಿಷ್ಟ್ಯಗಳನ್ನು ಹೇಳಿದ್ದಾರೆ. ಅವುಗಳಿಂದ ಅಧ್ಯಾತ್ಮದಲ್ಲಿನ ಓರ್ವ ಆದರ್ಶ ಮಾರ್ಗದರ್ಶಕ, ಸಾಧಕ ಮತ್ತು ಶಿಷ್ಯ, ಹೀಗೆ ಪರಾತ್ಪರ ಗುರು ಡಾಕ್ಟರರ ವ್ಯಕ್ತಿತ್ವದ ವಿವಿಧ ಸ್ತರಗಳನ್ನು ಈ ಗ್ರಂಥವು ತೆರೆದಿಡುತ್ತದೆ.

**೪. ಪರಾತ್ಪರ ಗುರು ಡಾಕ್ಟರರ ಅಧ್ಯಯನವರ್ಗಗಳ ಅಸಾಮಾನ್ಯ ಫಲಶೃತಿ ! :** ಪರಾತ್ಪರ ಗುರು ಡಾಕ್ಟರರು ಕೇವಲ ಕೆಲವು ವರ್ಷಗಳು ತೆಗೆದುಕೊಂಡ ಅಧ್ಯಯನವರ್ಗಗಳಿಂದ ಅನೇಕ ಸಾಧಕರು ತಯಾರಾದರು ಮತ್ತು ಒಳ್ಳೆಯ ಸಾಧನೆಯನ್ನು ಮಾಡಿ ಅವರು ಅಧ್ಯಾತ್ಮದಲ್ಲಿ ಪ್ರಗತಿ ಮಾಡಿಕೊಂಡರು. ಅನೇಕ ಸಾಧಕರು ಹಿಂದೂ ಸಂಘಟನೆ, ಧರ್ಮಜಾಗೃತಿ ಮುಂತಾದ ಕಾರ್ಯಗಳಲ್ಲಿ ಜವಾಬ್ದಾರಿ ತೆಗೆದುಕೊಂಡು ಸೇವೆಯನ್ನು ಮಾಡುತ್ತಿದ್ದಾರೆ. ಸನಾತನದ ಪೂ. ಶಿವಾಜಿ ವಟಕರ್, ಸನಾತನ ಸಂಸ್ಥೆಯ ಗೌರವಾನ್ವಿತ ಕಾನೂನು ವಿಷಯದ ಸಲಹೆಗಾರರಾದ ನ್ಯಾಯವಾದಿ (ವಕೀಲ) ಶ್ರೀ. ರಾಮದಾಸ ಕೇಸರಕರ್, ಸನಾತನದ ಪೂರ್ಣವೇಳೆ ಧರ್ಮಪ್ರಚಾರಕರಾದ ಶ್ರೀ. ಅಭಯ ವರ್ತಕ್ ಇವರಂತಹ ಸಾಧಕರು 'ಅಧ್ಯಯನವರ್ಗಗಳಿಂದ ತಾವು ಹೇಗೆ ತಯಾರಾದರು ?' ಎಂಬುದನ್ನು ಈ ಗ್ರಂಥಕ್ಕಾಗಿ ಬರೆದುಕೊಟ್ಟಿದ್ದಾರೆ. ಕೇವಲ ಕೆಲವೇ ಸಾಧಕರು ಬರೆದುಕೊಟ್ಟ ಮಾಹಿತಿಯಿಂದ ಈ ಗ್ರಂಥ ತಯಾರಾಯಿತು. ಅಧ್ಯಯನವರ್ಗಗಳಿಗೆ ಬರುವ ಪ್ರತಿಯೊಬ್ಬರೂ ಮಾಹಿತಿಯನ್ನು ಬರೆದುಕೊಟ್ಟರೆ ದೊಡ್ಡ ವಾಙ್ಮಯವೇ ತಯಾರಾಗುವುದರಲ್ಲಿ ಸಂದೇಹವಿಲ್ಲ. ಇದರಿಂದ ಪರಾತ್ಪರ ಗುರು ಡಾಕ್ಟರರ ಅಧ್ಯಯನವರ್ಗಗಳ ಅಸಾಮಾನ್ಯ ಫಲಶೃತಿ ಗಮನಕ್ಕೆ ಬರುತ್ತದೆ.

**೫. ಪರಾತ್ಪರ ಗುರು ಡಾಕ್ಟರರು ಅಧ್ಯಯನವರ್ಗಗಳಲ್ಲಿ ಮಾಡುತ್ತಿದ್ದ ಮಾರ್ಗ ದರ್ಶನದ ಪದ್ಧತಿಯು ಮುಂದೆ ಸನಾತನದ ಸತ್ಸಂಗ ಮತ್ತು ಗ್ರಂಥಗಳಿಗೆ ಉಪಯುಕ್ತ ವಾಗುವುದು :** ಪರಾತ್ಪರ ಗುರು ಡಾಕ್ಟರರು ಅಧ್ಯಯನವರ್ಗಗಳಲ್ಲಿ ಅಧ್ಯಾತ್ಮದಲ್ಲಿನ ವಿವಿಧ ಕೃತಿಗಳ ಹಿಂದಿನ ಶಾಸ್ತ್ರವನ್ನು ಹೇಳುತ್ತಿದ್ದರು, ಜಿಜ್ಞಾಸುಗಳಿಗೆ ಸಮಾಧಾನ ವಾಗುವವರೆಗೆ ಅವರ ಸಂದೇಹಗಳ ನಿವಾರಣೆಯನ್ನು ಮಾಡುತ್ತಿದ್ದರು, ಅಧ್ಯಾತ್ಮ ದಲ್ಲಿನ ಕಠಿಣ ತಾತ್ತ್ವಿಕ ಭಾಗವು ಸರ್ವಸಾಮಾನ್ಯರಿಗೆ ಸಹಜವಾಗಿ ತಿಳಿಯು ವಂತಹ ಭಾಷೆಗಳಲ್ಲಿ (ಉದಾ. ಚಿತ್ರ, ಕೋಷ್ಟಕ, ಶೇಕಡಾವಾರು ಭಾಷೆಗಳಲ್ಲಿ) ಕಲಿಸುತ್ತಿದ್ದರು ಮತ್ತು ಸಾಧನೆಯಲ್ಲಿನ ಅಡಚಣೆಗಳಿಗೆ ಹೇಗೆ ದಾರಿಯನ್ನು ಹುಡುಕಬೇಕು ಎಂಬುದನ್ನೂ ಹೇಳುತ್ತಿದ್ದರು. ಪರಾತ್ಪರ ಗುರು ಡಾಕ್ಟರರ ಮಾರ್ಗದರ್ಶನ ಮಾಡುವ ಈ ಪದ್ಧತಿಯನ್ನು ಮುಂದೆ ಸನಾತನ ಸಂಸ್ಥೆಯ ವತಿಯಿಂದ ತೆಗೆದು ಕೊಳ್ಳಲಾಗುವ ಸತ್ಸಂಗಗಳಲ್ಲೂ ಉಪಯೋಗಿಸಲಾಯಿತು. ಪರಾತ್ಪರ ಗುರು ಡಾಕ್ಟರರು

ಸಂಕಲನ ಮಾಡುವ ಗ್ರಂಥಗಳಲ್ಲೂ ಈ ಪದ್ಧತಿಯನ್ನು ಬಳಸಲಾಗುತ್ತದೆ. ಈಗ ಪರಾತ್ಪರ ಗುರು ಡಾಕ್ಟರರು ಸ್ವತಃ ಅಧ್ಯಯನವರ್ಗಗಳನ್ನು ತೆಗೆದುಕೊಳ್ಳದಿದ್ದರೂ, ಸನಾತನದ ಸತ್ಸಂಗ ಮತ್ತು ಗ್ರಂಥಗಳಿಂದ ಸಾವಿರಾರು ಜಿಜ್ಞಾಸುಗಳು ಸಾಧನೆಯನ್ನು ಮಾಡುತ್ತಿದ್ದಾರೆ ಮತ್ತು ಅವುಗಳಲ್ಲಿನ ಅನೇಕರು ಅಧ್ಯಾತ್ಮದಲ್ಲಿ ಒಳ್ಳೆಯ ಪ್ರಗತಿಯನ್ನೂ ಮಾಡಿಕೊಳ್ಳುತ್ತಿದ್ದಾರೆ.

**೬. ಪ್ರಾರ್ಥನೆ :** ‘ಜಿಜ್ಞಾಸುಗಳು ಮತ್ತು ಸಾಧಕರು ಪ್ರಸ್ತುತ ಗ್ರಂಥದಿಂದ ಒಳ್ಳೆಯ ಲಾಭ ಪಡೆದುಕೊಳ್ಳಲಿ ಹಾಗೂ ತಮ್ಮ ಸಾಧನೆಯನ್ನು ಹೆಚ್ಚಿಸಿ ಆದಷ್ಟು ಬೇಗನೇ ಆಧ್ಯಾತ್ಮಿಕ ಉನ್ನತಿ ಮಾಡಿಕೊಳ್ಳಲು ಸಾಧ್ಯವಾಗಲಿ’ ಎಂದು ಶ್ರೀ ಗುರುಚರಣಗಳಲ್ಲಿ ಪ್ರಾರ್ಥನೆ !’

**– (ಪೂ.) ಶ್ರೀ. ಸಂದೀಪ ಆಳಶಿ** (೨೫.೧೦.೨೦೨೦)

## ಗ್ರಂಥದ ಕೆಲವು ಕಡೆಗಳಲ್ಲಿ ‘ಪರಾತ್ಪರ ಗುರು ಡಾ. ಜಯಂತ ಆಠವಲೆ’ ಇವರನ್ನು ‘ಪ.ಪೂ. ಡಾ. ಜಯಂತ ಆಠವಲೆ’ ಎಂದು ಉಲ್ಲೇಖಿಸಲು ಕಾರಣ

ಪ.ಪೂ. ಡಾ. ಜಯಂತ ಆಠವಲೆಯವರ ಹಿರಿಯ ಸಹೋದರರಾದ ಸದ್ಗುರು ಡಾ. ವಸಂತ ಆಠವಲೆ ಇವರು ಪ.ಪೂ. ಡಾ. ಜಯಂತ ಆಠವಲೆಯವರ ಬಗ್ಗೆ ೨೮.೧.೨೦೧೩ ರಂದು ರಚಿಸಿದ ‘ಶ್ರೀ ಸದ್ಗುರುವಂದನ’ ಎಂಬ ಕಾವ್ಯದಲ್ಲಿ ಅವರನ್ನು ‘ಪರಾತ್ಪರ ಗುರು’ ಎಂದು ಸಂಬೋಧಿಸಿದ್ದಾರೆ. ಅಂದಿನಿಂದ ಪ.ಪೂ. ಡಾ. ಆಠವಲೆಯವರನ್ನು ‘ಪರಾತ್ಪರ ಗುರು’ ಎಂದು ಉಲ್ಲೇಖಿಸಲು ಪ್ರಾರಂಭವಾಯಿತು. ಆದ್ದರಿಂದ ಪ್ರಸ್ತುತ ಗ್ರಂಥದಲ್ಲಿ ಫೆಬ್ರವರಿ ೨೦೧೩ ರ ಮುಂಚೆಯ ಬರವಣಿಗೆಗಳಲ್ಲಿ ಅವರ ಹೆಸರಿನ ಹಿಂದೆ ‘ಪ.ಪೂ.’ ಎಂದು ಹೇಳಲಾಗಿದೆ.


## ಸನಾತನದ ಗ್ರಂಥಕಾರ್ಯದಲ್ಲಿ ಪಾಲ್ಗೊಂಡು ಸಮಷ್ಟಿ ಸಾಧನೆ ಮಾಡಿ !

- ಮರಾಠಿ ಭಾಷೆಯಲ್ಲಿನ ಗ್ರಂಥಗಳನ್ನು ಕನ್ನಡ ಭಾಷೆಗೆ ಅನುವಾದ ಮಾಡುವುದು
- ಗ್ರಂಥದ ರಚನೆಯನ್ನು ‘ಇನ್‌ಡಿಸೈನ್’ ಎಂಬ ಗಣಕ ತಂತ್ರಾಂಶದಲ್ಲಿ ಮಾಡುವುದು

ಗ್ರಂಥನಿರ್ಮಿತಿಯ ಕಾರ್ಯದಲ್ಲಿ ಪಾಲ್ಗೊಳ್ಳಲು ಸಂಪರ್ಕಿಸಿ !

೯೩೪೨೪ ೩೫೬೧೭ ಅಥವಾ kannada.granth@gmail.com